ಜೊಲ್ಲೆ ಗ್ರುಪ್
ವಾರ್ತಾ ಪತ್ರ
(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)
ನವೆಂಬರ್ 2025–ಸಂಪುಟ–9 ಸಂಚಿಕೆ–11

# ದರ್ಪಣ









## ಡಿಸಿಸಿ ಬ್ಯಾಂಕ್‌ನ ನೂತನ ಸಾರಥಿ

### ಜೊಲ್ಲೆ ಗ್ರುಪ್ ಸಂಸ್ಥಾಪಕರು, ಮಾಜಿ ಸಂಸದರು, ಹಾಗೂ ಸಹಕಾರ ರತ್ನ

## ಶ್ರೀ ಅಣ್ಣಾಸಾಹೇಬ ಜೊಲ್ಲೆ

ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ನಿರೀಕ್ಷಿತವಾಗಿ ಬ್ಯಾಂಕಿನ ಅಧ್ಯಕ್ಷರಾಗಿ ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆಯವರು ಅವಿರೋಧವಾಗಿ ಆಯ್ಕೆ ಆಗಿದ್ದು, ಉಪಾಧ್ಯಕ್ಷರಾಗಿ ಕಾಗವಾಡ ಶಾಸಕರಾದ ರಾಜು ಕಾಗೆ ಅವರು ಆಯ್ಕೆ ಆಗಿ ಎಲ್ಲರ ಗಮನ ಸೆಳೆದರು.

ಸೋಮವಾರ ಮಾಧ್ಯದವರೊಂದಿಗೆ ಬಿಡಿಸಿಸಿ ಬ್ಯಾಂಕನ ನೂತನ ಅಧ್ಯಕ್ಷರಾದ ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಯವರು ಮಾತನಾಡಿದ ಅವರು, ಜಾರಕಿಹೊಳಿ ಕುಟುಂಬ ಹಾಗೂ ಎಲ್ಲ ನಿರ್ದೇಶಕರ ಸಹಕಾರದಿಂದ ಅಧ್ಯಕ್ಷನಾಗಿದ್ದೇನೆ. ರೈತರು, ಗ್ರಾಹಕರು, ಕಾರ್ಮಿಕರು, ಸಿಬ್ಬಂದಿ ಹಾಗೂ ಹಿಂದುಳಿದ ವರ್ಗದ ಜನರ ಸೇವೆ ಮಾಡಲಾಗುವುದು. ಬ್ಯಾಂಕಿನ ಶ್ರೇಯೋಭಿವೃದ್ಧಿಗೆ ಶ್ರಮಿಸಲಾಗುವುದು. ಗ್ರಾಹಕರು, ಪಿಕೆಪಿಎಸ್‌ಗಳ ಸಭೆ ಮಾಡಿ ಅವರ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತೇವೆ ಎಂದರು.

ಬಿಡಿಸಿಸಿ ಬ್ಯಾಂಕ ರಾಜ್ಯದಲ್ಲಿಯೇ ನಂಬರ್‌ಒನ್ ಸ್ಥಾನಕ್ಕೆ ಯಾವಾಗಲೋ ಬರಬೇಕಿತ್ತು. ಆದರೆ ಆಗಿಲ್ಲ. ಹಣಕಾಸು ಸಂಸ್ಥೆಗಳನ್ನು ನಡೆಸಿದ ಅನುಭವದ ಹಿನ್ನೆಲೆಯಲ್ಲಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ ನಂಬರ್‌ನ್ ಬ್ಯಾಂಕ ಮಾಡಿ ಮಾದರಿ ಮಾಡಲಾಗುವುದು ಎಂದು ಹೇಳಿದರು. ಅಭಿವೃದ್ಧಿ ವಿಷಯದಲ್ಲಿ ಪಕ್ಷಾತೀತ ಮತ್ತು ಜಾತ್ಯತೀತವಾಗಿ ನಾವೆಲ್ಲರೂ ಒಟ್ಟಾಗಿ ಹೋಗುತ್ತೇವೆ. ರೈತರು, ಗ್ರಾಹಕರಿಗೆ ಒಳ್ಳೆಯದು ಆಗುವ ನಿಟ್ಟಿನಲ್ಲಿ ಎಲ್ಲರ ಸಲಹೆ ಸ್ವೀಕರಿಸುತ್ತೇವೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ ನಿರೀಕ್ಷೆಯಂತೆ ನಾವು ನುರಿತ ಸಹಕಾರಿ ಧುರಿಣ ಅಣ್ಣಾಸಾಹೇಬ ಜೊಲ್ಲೆ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದು, ಅದರಂತೆ ಶಾಸಕರಾದ ರಾಜು ಕಾಗೆ ಅವರನ್ನು ಉಪಾಧ್ಯಕ್ಷರನ್ನಾಗಿ ಎಲ್ಲ ಸದಸ್ಯರ ಸಹಕಾರದಿಂದ ಬ್ಯಾಂಕ ಅಭಿವೃದ್ಧಿಯ ಹಿತದೃಷ್ಟಿಯಿಂದ ಆಯ್ಕೆ ಮಾಡಿದ್ದು 3 ನೇ ಸ್ಥಾನದಲ್ಲಿರುವ ಬ್ಯಾಂಕನ್ನು ಪ್ರಥಮ ಸ್ಥಾನಕ್ಕೆ ತರುವ ಗುರಿ ಹೊಂದಲಾಗಿದೆ ಎಂದರು. ಜನ ಇಂತಹ ಸಮಯದಲ್ಲಿ ಕೆಲಸಕ್ಕಾಗಿ ಕಬ್ಬು ಕಟ್ಟಾವಿಗೆ ಠೇವಣೆ ಹಣ ಹಿಂಪಡೆದಿದ್ದು ಮತ್ತೆ ಹಣ ಠೇವಣಿ ಮಾಡಲಿದ್ದಾರೆ ಎಂದರು.

ಶಾಸಕ ಬಾಲಚಂದ್ರ ಜಾರಕಿಹೊಳಿ ಮಾತನಾಡಿ ಎಲ್ಲರ ಸಹಕಾರದಿಂದ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ನಡೆದಿದ್ದು ಜೊಲ್ಲೆ ಅವರ ನೇತೃತ್ವದಲ್ಲಿ ಬ್ಯಾಂಕ ಅಭಿವೃದ್ಧಿ ಹೊಂದಲಿದ್ದು ಬ್ಯಾಂಕ ಅಭಿವೃದ್ಧಿಗೆ ಎಲ್ಲರೂ ಸೇರಿ ಕೆಲಸ ಮಾಡೋಣ ಎಂದರು. ಜೊಲ್ಲೆ ಅವರ ಸಹಕಾರಿ ಬ್ಯಾಂಕ ರಂಘದ ಅನುಭವದಲ್ಲಿ ಮುಂದೆ ಸಾಗಿ ಎಲ್ಲರನ್ನು ವಿಶ್ವಾಸಕ್ಕೆ ತಗೆದುಕೊಂಡು ಸತತ 5 ವರ್ಷ ಅವರೆ ಅಧ್ಯಕ್ಷರಾಗಿರುತ್ತಾರೆ. ಉಪಾಧ್ಯಕ್ಷ ರಾಜು ಕಾಗೆ ಅವರು ಪಿನಿಕ್ಸನಂತೆ ಆಯ್ಕೆ ಆಗಿದ್ದು, ಎಲ್ಲರೂ ಸೇರಿ ಬ್ಯಾಂಕ ಅಭಿವೃದ್ಧಿಗೆ ಶ್ರಮಿಸುತ್ತೇವೆ ಎಂದರು.

### ನಿಪ್ಪಾಣಿಯಲ್ಲಿ ಅದ್ದೂರಿ ಸ್ವಾಗತ

ಬೆಳಗಾವಿ ಡಿಸಿಸಿ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಮಾಜಿ ಸಂಸದರಾದ ಅಣ್ಣಾಸಾಹೇಬ ಜೊಲ್ಲೆ ಅವರು ನಿಪ್ಪಾಣಿ ನಗರಕ್ಕೆ ಆಗಮಿಸುತ್ತಿದ್ದಂತೆ ಅದ್ದೂರಿ ಸ್ವಾಗತ ಕೋರಲಾಯಿತು. ಅಣ್ಣಾಸಾಹೇಬ ಜೊಲ್ಲೆ ಅವರ ಆಗಮನಕ್ಕಾಗಿ ಕಾಯುತ್ತಿದ್ದ ಸಾವಿರಾರು ಕಾರ್ಯಕರ್ತರು ಮುನ್ಸಿಪಲ್ ಹೈಸ್ಕೂಲ್ ಹತ್ತಿರ ಆಗಮಿಸುತ್ತಿದ್ದಂತೆಯೇ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಗುಲಾಲ ಎರಚಿ, ಪಟಾಕಿ ಸಿಡಿಸಿ ಹಾಗೂ ಹೂವಿನ ಸುರಿಮಳೆಯನ್ನು ಸುರಿಸಲಾಯಿತು. ಸಾವಿರಾರು ಕಾರ್ಯಕರ್ತರ ಜಯಘೋಷದ ಜೊತೆಗೆ ನಗರದ ಪ್ರಮುಖ ಬೀದಿಯಿಂದ ಸಾಗಿದ ಈ ಬೃಹತ್ ಮೆರವಣಿಗೆಯು ಬಸ್ ನಿಲ್ದಾಣದ ಸಂಭಾಜಿ ರಾಜೇ ವೃತ್ತದ ವರೆಗೆ ಸಾಗಿತು.

ಶ್ರೀ ಬೀರೇಶ್ವರ ಕೋ–ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ–ಸ್ಟೇಟ್)





ಜೊಲ್ಲೆ ಗ್ರೂಪ್ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರು 63ನೇ ಜನ್ಮದಿನದ ನಿಮಿತ್ತವಾಗಿ ಉತ್ತರಪ್ರದೇಶದ ಕಾನ್ಪುರ್‌ದ ವಿಮಾನ ನಿಲ್ದಾಣದಲ್ಲಿ ಸರಳವಾಗಿ ಹುಟ್ಟು ಹಬ್ಬವನ್ನು ಆಚರಿಸಿಕೊಂಡ ಕ್ಷಣ.

# ಕನ್ನಡ ನಾಡು ಕಂಡ ಧೀಮಂತ ಜನನಾಯಕ ಶ್ರೀ ಅಣ್ಣಾಸಾಹೇಬ ಜೊಲ್ಲೆ

ಕನ್ನಡ ನಾಡು ಸುದೀರ್ಘ ಇತಿಹಾಸ, ಭವ್ಯ ಪರಂಪರೆ ಹೊಂದಿದ ಬೀಡು. ಇಂತಹ ನಾಡಿನಲ್ಲಿ ಅನೇಕ ಯುಗಪುರುಷರು ಬಾಳಿ ಬೆಳಗಿ ಹೋಗಿದ್ದಾರೆ. ಹಲವಾರು ಸಾಧು ಸಂತರಿಗೆ ಜನ್ಮ ನೀಡಿದ ನಾಡು. ನಮ್ಮ ಇಂತಹ ಸಿರಿವಂತ ನಾಡಿನಲ್ಲಿ ಅತ್ಯಂತ ಸರಳ ಸಜ್ಜನ ನೇರ ನುಡಿಯ ನೇತಾರ, ಶಿಸ್ತಿನ ಬದುಕಿನ ಧ್ರುವತಾರೆ ಸಹಕಾರ ರತ್ನ ಶ್ರೀ ಅಣ್ಣಾಸಾಹೇಬ ಜೊಲ್ಲೆ ಒಬ್ಬರು. ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಗ್ರಾಮದ ಆದರ್ಶ ಜೊಲ್ಲೆ ಮನೆತನದ ಆದರ್ಶ ದಂಪತಿಗಳಾದ ಶಂಕರ ಹಾಗೂ ಲಕ್ಷ್ಮೀಬಾಯಿ ದಂಪತಿಗಳ ಉದರದಲ್ಲಿ 08-10-1963 ರಂದು ಅಣ್ಣಾಸಾಹೇಬರು ಜನಿಸಿದರು. ತಂದೆ ತಾಯಿಯ ಮಾರ್ಗದರ್ಶನದಲ್ಲಿ ಬದುಕು ರೂಪಿಸಿಕೊಂಡ ಇವರು ಮನೆತನದ ಆದರ್ಶಗಳನ್ನು ಎತ್ತಿ ಹಿಡಿದು ಶಿಸ್ತಿನ ಜೀವನವನ್ನು ಅಳವಡಿಸಿಕೊಂಡು ವಿಜಯಪುರ ಸೈನಿಕ ಶಾಲೆಯ ವಿದ್ಯಾರ್ಥಿಯಾಗಿ ಆದರ್ಶ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ. ತಂದೆಯ ಅಕಾಲಿಕ ನಿಧನದಿಂದ ಮನೆಯ ಜವಾಬ್ದಾರಿ ಹೊತ್ತು ತಾಯಿಯ ಮೌಖಿಕ ಮಾರ್ಗದರ್ಶನದೊಂದಿಗೆ ಸಹೋದರಿಯ ರೊಡಗೂಡಿ ಜೀವನಯಾತ್ರೆ ಆರಂಭಿಸಿದರು. ಸವಾಲಿನ ಮಧ್ಯದಲ್ಲೂ ಸಾರ್ಥಕ ಜೀವನ ರೂಪಿಸಿಕೊಂಡ ಇವರದು ಆದರ್ಶ ವ್ಯಕ್ತಿತ್ವ. ಮುಂದೆ ಸೌ. ಶಶಿಕಲಾ ಅವರೊಂದಿಗೆ ದಾಪಂತ್ಯ ಜೀವನಕ್ಕಿಳಿದು ಜ್ಯೋತಿಪ್ರಸಾದ, ಬಸವಪ್ರಸಾದರ ಆದರ್ಶ ತಂದೆಯಾಗಿ ಮಾದರಿಯಾಗಿರುವರು.

"ತಾಳಿದವನು ಬಾಳಿಯಾನು" ಎಂಬ ಮಾತಿನಂತೆ ಜೀವನದಲ್ಲಿ ಬಂದ ಎಲ್ಲ ಸವಾಲುಗಳನ್ನು ಎದುರಿಸಿ ಸಹಕಾರ ರಂಗದ ಧೀಮಂತ ನಾಯಕರಾಗಿ ಹೊರಹೊಮ್ಮಿದ್ದಾರೆ. ಸಮಾಜ ಮುಖಿ ಸೇವೆ ಮಾಡುತ್ತಾ ಜನನಾಯಕರಾಗಿ ಸರ್ವರಂಗದಲ್ಲೂ ತಮ್ಮದೇಯಾದ ಛಾಪು ಮೂಡಿಸಿದ್ದಾರೆ. ಸಾವಿರಾರು ಕುಟುಂಬಗಳ ಬಾಳಿನ ಬೆಳಕಾಗಿ ಬಡವರ ನೊಂದವರ ಧ್ವನಿಯಾಗಿದ್ದಾರೆ. ಜೊಲ್ಲೆ ಸಮೂಹದ ಸಂಸ್ಥಾಪಕರಾಗಿ ಹಲವಾರು ಅಂಗಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಚಿಕ್ಕೋಡಿಯ ಸಂಸದರಾಗಿ ಸಾವಿರಾರು ಕೋಟಿ ಅನುದಾನವನ್ನು ತಂದು ಕ್ಷೇತ್ರದ ಚಿತ್ರಣವನ್ನೇ ಬದಲು ಮಾಡಿದ ಕೀರ್ತಿ ಇವರದು. ಇಡಿ ದೇಶ ಭಯಾನಕ ಕರೊನಾ ಎಂಬ ರೋಗಕ್ಕೆ ತುತ್ತಾದಾಗ ಜನನಾಯಕನಾಗಿ ಜನರ ರಕ್ಷಣೆಗೆ ಧಾವಿಸಿದ ಸಂಸದರಿವರು. ರಾಜಕೀಯ, ಸಾಮಾಜಿಕ, ಆರ್ಥಿಕ, ಸಹಕಾರ, ಶೈಕ್ಷಣಿಕ, ಆಧ್ಯಾತ್ಮಿಕ, ಕ್ರೀಡಾ ಕ್ಷೇತ್ರದಲ್ಲೂ ವಿಶೇಷ ಸೇವೆ ಸಲ್ಲಿಸುತ್ತಾ ಸರ್ವ ರಂಗದ ನೇತಾರರಾಗಿ ಹೊರ ಹೊಮ್ಮಿದ್ದಾರೆ.

ಕಾಯಕವೇ ಕೈಲಾಸ ಎಂಬ ಶಿರೋನಾಮೆಯಂತೆ ಅಣ್ಣಾಸಾಹೇಬ ಜೊಲ್ಲೆ ಅವರು ಬದುಕಿನ ಬಾಳ ಪಥವನ್ನು ಸವಿಸಿದವರು. ನೇರ ನುಡಿಯ ನೇತಾರನಾಗಿ ನಮಗೆಲ್ಲಾ ಮಾರ್ಗದರ್ಶಕರಾಗಿದ್ದಾರೆ. ಜೊಲ್ಲೆ ಗ್ರುಪ ಮೂಲಕ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಚಿಕ್ಕೋಡಿ ಕ್ಷೇತ್ರದ ಮನೆಮಾತಾಗಿ ಪ್ರತಿಭೆಗಳ ಅನಾವರಣಕ್ಕೆ ವೇದಿಕೆ ಕಲ್ಪಿದ್ದಾರೆ. ಸಾವಿರಾರು ಯುವಕರ ಕೈಗೆ ಉದ್ಯೋಗಗಳನ್ನು ನೀಡಿ ಅವರ ಬಾಳಿನ ನಂದಾದೀಪವಾಗಿದ್ದಾರೆ. ಜೊಲ್ಲೆ ಶಿಕ್ಷಣ ಸಂಸ್ಥೆಯ ಮೂಲಕ ಕೆಜಿ ಇಂದ ಪಿಜಿ ವರೆಗೂ ಉನ್ನತ ವಿದ್ಯಾಲಯಗಳನ್ನು ತೆರೆದು ಗಡಿ ಭಾಗದ ವಿದ್ಯಾರ್ಥಿಗಳ ಜ್ಞಾನದಾಹಕ್ಕೆ ಆಸರೆಯಾಗಿದ್ದಾರೆ.

ಜೊಲ್ಲೆ ಪರಿವಾರದ ಆದರ್ಶ ವ್ಯಕ್ತಿಯಾಗಿ ಸಹಕಾರ ರಂಗದ ಭೀಷ್ಮನಾಗಿ ಕಾಯಕ ಮಾಡುತ್ತಾ ಕನ್ನಡ ನಾಡಿನ ಮೇಧಾವಿ ರಾಜಕಾರಣಿ ಎನಿಸಿಕೊಂಡಿದ್ದಾರೆ. ಜೊಲ್ಲೆ ಗ್ರೂಪನ ಸಂಸ್ಥಾಪಕರಾಗಿ, ಚಿಕ್ಕೋಡಿ ನಣದಿ ಸಕ್ಕರೆ ಕಾರ್ಖಾನೆ ನಿರ್ದೇಶಕರಾಗಿ, ನಿಪ್ಪಾಣಿ ಹಾಲಸಿದ್ಧನಾಥ ಸಕ್ಕರೆ ಕಾರ್ಖಾನೆಯ ಮಾರ್ಗದರ್ಶಕರಾಗಿ ಸೇವೆ ನೀಡುತ್ತಿದ್ದಾರೆ. ಅಳಿವಿನ ಅಂಚಿನಲ್ಲಿದ್ದ ನಿಪ್ಪಾಣಿ ಹಾಲಸಿದ್ಧನಾಥ ಸಕ್ಕರೆ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಿ ರೈತರ ಬಾಳಿನ ಬೆಳಕಾಗಿದ್ದಾರೆ. ಸಹಕಾರ ಮಹರ್ಷಿ ಲಿ. ಅಪ್ಪಣಗೌಡರು ಕಟ್ಟಿದ ಸಂಕೇಶ್ವರ ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಯು ಅಳಿವಿನ ಅಂಚಿನಲ್ಲಿ ಬಂದು ನಿಂತಾಗ ರೈತರ ಆಶಯದಂತೆ ಆ ಕಾರ್ಖಾನೆಯ ಪುನರುಜ್ಜೀವನಕ್ಕೆ ಮುಂದಾಗಿದ್ದಾರೆ. ಅತೀ ವಿಷೇಶವಾಗಿ ದಿ. ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ., ಬೆಳಗಾವಿ ಇದರ ಅಧ್ಯಕ್ಷರಾಗಿ ಸಹಕಾರ ಚಳುವಳಿಯನ್ನು ಯಶಸ್ವಿಯಾಗಿ ಮುನ್ನಡೆಸುತತಿದ್ದಾರೆ. ಇವರನ್ನು ಎಲ್ಲರೂ ಪ್ರೀತಿಯಿಂದ "ಅಣ್ಣಾ" ಎಂದೆ ಕರೆಯುತ್ತಾರೆ. ಕೇವಲ ಸಹಕಾರ ರಂಗದ ಸೇವೆ ಮಾಡದೇ ನಾಡು ನುಡಿ ಸೇವೆಯಲ್ಲೂ ಮುಂದಾಳತ್ವ ವಹಿಸಿದ್ದಾರೆ. ವಿವಿಧ ಕನ್ನಡ ಸಮ್ಮೇಳನಗಳನ್ನು ಆಯೋಜಿಸಲು ಕನ್ನಡಪರ ಸಂಘಟನೆಗಳಿಗೆ ಬೆನ್ನಾಗಿ ನಿಂತಿದ್ದಾರೆ. ಕಾಯಕದಲ್ಲಿ ಶಿಸ್ತು, ಕಠೋರ ನಿಲುವು ಇವರ ಏಳಿಗೆಗೆ ಮುನ್ನುಡಿ. ಬರೆದಿದೆ. ಯಾವುದಕ್ಕೂ ರಾಜಿಯಾಗದೇ ಇಟ್ಟ ಗುರಿಯನ್ನು ಈಡೇರಿಸುವ ಛಲಗಾರರಾಗಿ ಹೊರಹೊಮ್ಮಿದ್ದಾರೆ.

ಅವರಲ್ಲಿರುವ ದೂರದೃಷ್ಟಿ ಮುಂದಾಲೋಚನೆ ನಿಜಕ್ಕೂ ಶ್ಲಾಘನೀಯ. ಸಂಘಟನಾ ಚತುರರಾಗಿ ಕ್ರಿಯಾಶೀಲ ವ್ಯಕ್ತಿತ್ವ ರೂಪಿಸಿಕೊಂಡ ಇವರ ಬದುಕು ನಂದಾದೀಪದಂತೆ ಸದಾ ಪ್ರಜ್ವಲಿಸಲಿ. ಇವರ ರಾಜಕೀಯ ಹಾಗೂ ಸಹಕಾರ ರಂಗದ ಏಳಿಗೆ ಉತ್ತರೋತ್ತರವಾಗಿ ಬೆಳೆಯಲಿ ಎಂದು ಹಾರೈಸುವೆ.

ಪ್ರೊ. ಮಿಥುನ ಅಂಕಲಿ
ಸಹ ಪ್ರಾಧ್ಯಾಪಕರು
ಬಸವಜ್ಯೋತಿ ಪದವಿ ಮಹಾವಿದ್ಯಾಲಯ, ನಣದಿ.

# ಶಿಕ್ಷಕ

ಶಿರಬಾಗಿ ನಮಸ್ಕರಿಸಲು ಅರ್ಹ
ಕ್ಷಣಿಕ ಸುಖಕೆ ಆಸೆ ಪಡದವ
ಕಷ್ಟದಲ್ಲಿ ಹಗಲಿರುಳು ವಿದ್ಯಾರ್ಥಿಗಳಿಗಾಗಿ ಮಿಡಿಯುವವ.

ಶಿಷ್ಟಾಚಾರ ಮೈ-ಮನ ತುಂಬಿಕೊಂಡವ
ಕ್ಷತ್ರಿಯರಂತೆ ಆತ್ಮಸ್ಥೈರ್ಯ, ಧೈರ್ಯ ಹೊಂದಿದವ
ಕಗ್ಗಲ್ಲಂತಿರುವ ಮಕ್ಕಳನ್ನು ಕೆತ್ತಿ ಮೂರ್ತಿ ಮಾಡುವವ.


ಶೀಲಗುಣ ಸದ್ಗುಣ ಸಂಪನ್ನ
ಕ್ಷಮಾಗುಣ ಅಮ್ಮನಂತಿರುವ ಮನ
ಕಣ್ಣೀರು ಒರೆಸಿ ಕೈಹಿಡಿದು ನಡೆಸುವ ಗುರುವಿಗೆ ನಮನ.

ಶಿವ ಬ್ರಹ್ಮ ವಿಷ್ಣುವಿನಂತೆ
ಕ್ಷಣ-ಕ್ಷಣವೂ ಲೋಕಕಲ್ಯಾಣದ ಚಿಂತೆ
ಕರುಣೆ-ದಯೆ ಮಮತೆಯ ಬುದ್ಧನಂತೆ.

ಶಿಷ್ಟ ರಕ್ಷಕ ದುಷ್ಟಗುಣ ಸಂಹರಿಸುವವ
ಕ್ಷಕಿರಣದಂತೆ ಮನ ಆತ್ಮ-ಹೃದಯ ಬೆಳಗುವವ
ಕನಸ ನನಸಾಗಿಸಿ ಸರ್ವರಲ್ಲೂ ಸಂತಸ ತುಂಬುವವ.

ಶಿಷ್ಯರ ಕಲ್ಯಾಣ, ವಿಕಾಸ ಸದಾ ಬಯಸುವವ
ಕ್ಷಣ-ಕ್ಷಣ ಎಚ್ಚರಿಸಿ ಗುರಿ ಕಡೆಗೆ ಒಯ್ಯುವವ
ಕಠಿಣವಾದುದ್ದನ್ನು ಸರಳೀಕರಿಸುವ ಗುರುವಿಗೆ ಸಭಾನಮನ.

ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ
ಸಹ ಪ್ರಾಧ್ಯಾಪಕರು
ಡಾ|| ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)
ಶಿಕ್ಷಣ ಮಹಾವಿದ್ಯಾಲಯ, ನಣದಿ



ಭೇಟಿ

ಹುಕ್ಕೇರಿ ತಾಲೂಕಿನ ಆನಂದಪುರ-ಹತ್ತರಗಿ ಗ್ರಾಮದ ಗ್ರಾಮ ದೇವತೆಯಾದ ಶ್ರೀ ಬನಶಂಕರಿದೇವಿ ದೇವಸ್ಥಾನದ ಕಳಸಾರೋಹಣ ಹಾಗೂ ಲಕ್ಷ ದೀಪೋತ್ಸವ ಕಾರ್ಯಕ್ರಮದ ನಿಮಿತ್ಯ ಜೊಲ್ಲೆ ದಂಪತಿ ದೇವಸ್ಥಾನಕ್ಕೆ ಭೇಟಿ ನೀಡಿ

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ



ಅಕ್ಟೋಬರ 31
2025ರ
ಆರ್ಥಿಕ ಸ್ಥಿತಿ

ಶಾಖೆಗಳು 81
ಠೇವು 358+ ಕೋಟಿ
ಸಾಲ 192+ ಕೋಟಿ
ಸದಸ್ಯರು 47+ ಸಾವಿರ
ಗುಣಿತಾವಣಿಗಳು 116+ ಕೋಟಿ
ಲಾಭ 2024-25 01+ ಕೋಟಿ



ದೇಣಿಗೆ

ಜೊಲ್ಲೆ ಗ್ರುಪ್ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಯವರ ಹುಟ್ಟುಹಬ್ಬದ ನಿಮಿತ್ಯ ಬೆಳಗಾವಿಯ "ಮಹೇಶ್ವರಿ ಅಂಧ ಮಕ್ಕಳ ಶಾಲೆ" ಗೆ ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ ಎಲ್ಲಾ ಸಿಬ್ಬಂದಿಗಳ ವತಿಯಿಂದ ಹಣ್ಣು ಹಂಪಲು ಜೊತೆಗೆ ರೂ 21,000/-ಗಳ ಕಿರು ಕಾಣಿಕೆಯ ಚೆಕ್ ದೇಣಿಗೆಯಾಗಿ ನೀಡಿದ ದೃಶ್ಯ.




ಉದ್ಘಾಟನೆ

ನಿಪ್ಪಾಣಿ ನಗರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಸಮುದಾಯ ಆರೋಗ್ಯ ಕೇಂದ್ರ ನಿಪ್ಪಾಣಿಯಲ್ಲಿ ನೂತನ ಡಯಾಲಿಸಿಸ್ ಕೇಂದ್ರದ ಉದ್ಘಾಟನೆಯನ್ನು ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಉದ್ಘಾಟಿಸುತ್ತಿರುವುದು.



ಉದ್ಘಾಟನೆ

ನಿಪ್ಪಾಣಿಯ ಛತ್ರಪತಿ ಶಿವಾಜಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದ 2025 ನೇ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಬಸವಜ್ಯೋತಿ ಯೂಥ ಫೌಂಡೇಶನ ಅಧ್ಯಕ್ಷ್ಯರಾದ ಶ್ರೀ ಬಸವಪ್ರಸಾದ ಜೊಲ್ಲೆಯವರು ಉದ್ಘಾಟಿಸಿದ ದೃಶ್ಯ.




ನಿಪ್ಪಾಣಿಯ ಶ್ರೀ ಹಾಲಸಿದ್ಧನಾಥ ಕೋ ಆಪರೇಟಿವ್ ಶುಗರ್ ಫ್ಯಾಕ್ಟರಿ ಲಿ,(ಬಹು –ರಾಜ್ಯ) ಇದರ 2025–26 ನೇ ಸಾಲಿನ ಕಬ್ಬು ನುರಿಸುವ ಹಂಗಾಮು ಮತ್ತು  ಬಾಯ್ಲರ್ ಪೂಜೆಯನ್ನು ನೀಡಸೋಸಿ ಸಿದ್ದಸಂಸ್ಥಾನ ಮಠದ ಪ.ಪೂ.ಶ್ರೀ ಮನ್ನಿರಂಜನ ಜಗದ್ಗುರು ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಜಿಗಳ ದಿವ್ಯಸಾನಿಧ್ಯದಲ್ಲಿ, ಜೊಲ್ಲೆ ದಂಪತಿ ಹಾಗೂ ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಚಾಲನೆ ನೀಡುತ್ತಿರುವುದು.




ನಿಪ್ಪಾಣಿಯಲ್ಲಿ ಜೊಲ್ಲೆ ಎಜುಕೇಶನ ಸೊಸೈಟಿಯ ಅಂಗಸಂಸ್ಥೆಯಾದ ಶಿವಶಂಕರ ಜೊಲ್ಲೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ 2025–26 ನೇ ಸಾಲಿನ ವಾರ್ಷಿಕ ಕ್ರೀಡಾಕೂಟ ಕಾರ್ಯಕ್ರಮಕ್ಕೆ ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡುತ್ತಿರುವುದು.




ನಿಪ್ಪಾಣಿ ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಹಾಗೂ ಜೊಲ್ಲೆ ಶಿಕ್ಷಣ ಸಂಸ್ಥೆಯ ಶ್ರೀ ಅಣ್ಣಾಸಾಹೇಬ ಜೊಲ್ಲೆ ಸ್ವತಂತ್ರ ವಸತಿ ಪದವಿಪೂರ್ವ ಮಹಾವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟವನ್ನು ಬಸವಜ್ಯೋತಿ ಯುಥ ಫೌಂಡೆಶನ್ ಅಧ್ಯಕ್ಷರಾದ ಶ್ರೀ ಬಸವಪ್ರಸಾದ ಜೊಲ್ಲೆ ಯವರು ಉದ್ಘಾಟಿಸುತ್ತಿರುವ ದೃಶ್ಯ.




ನಿಪ್ಪಾಣಿ ಶ್ರೀ ಉತ್ತಮ ಮಧುಕರ ಜಾಧವ ಅವರ ಮಾಲಿಕತ್ವದ ಟೈರ್ ಅಂಗಡಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಅಪಾರ ಪ್ರಮಾಣದ ಹಾನಿಯಾಗಿದ್ದು, ತಮ್ಮ ದೈನಂದಿನ ಜೀವನೋಪಾಯಕ್ಕೆ ಆಧಾರವಾಗಿರುವ ವ್ಯಾಪಾರ ತೊಂದರೆ ಎದುರಿಸುತ್ತಿರುವ ಹಿನ್ನಲೆಯಲ್ಲಿ, ಜೊಲ್ಲೆ ಗ್ರೂಪ್ ವತಿಯಿಂದ 50,000/ ಚೆಕ್‌ನ್ನು ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ನೀಡುತ್ತಿರುವ ದೃಶ್ಯ




ಜೊಲ್ಲೆ ಎಜ್ಯುಕೇಶನ್ ಸೊಸೈಟಿ ಹಾಗೂ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಸ್ಥಳೀಯ ಸಂಸ್ಥೆ ಚಿಕ್ಕೋಡಿ ಇವರ ಸಹಯೋಗದಲ್ಲಿ ಕಬ್–ಬುಲ್ ಬುಲ್ ಮತ್ತು ಸ್ಕೌಟ್–ಗೈಡ್ ಗಳ ಒಂದು ದಿನದ ಸ್ಕೌಟಿಂಗ್ ಪರಿಚಯಾತ್ಮಕ ಶಿಬಿರವನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಹಾಗೂ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸಿ, ಚಾಲನೆ ನೀಡಿದರು.




ಬೆಂಗಳೂರಿನ ಶ್ರೀ ಗೋಸಾಯಿ ಮಹಾಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರುಗಳಾದ ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ  ಸ್ವಾಮೀಜಿಗಳು ಭಿವಶಿ ನಿವಾಸಕ್ಕೆ ಸೌಹಾರ್ದಯುತವಾಗಿ ಆಗಮಿಸಿದಾಗ ಅವರನ್ನು ಜೊಲ್ಲೆ ದಂಪತಿ ಆತ್ಮೀಯವಾಗಿ ಬರಮಾಡಿಕೊಂಡು ದಿವ್ಯಾಶೀರ್ವಾದ ಪಡೆದುಕೊಂಡ ದೃಶ್ಯ.




ನಿಪ್ಪಾಣಿ ತಾಲೂಕಿನ ಗಳತಗಾ ಗ್ರಾಮದಲ್ಲಿ 17 ಲಕ್ಷ 70 ಸಾವಿರ ರೂ ಮೊತ್ತದಲ್ಲಿ ಸರ್ಕಾರಿ ಹಿರಿಯ ಕನ್ನಡ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆ ಹಾಗೂ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು  ಭೂಮಿ ಪೂಜೆ ನೆರವೇರಿಸಿ,ಚಾಲನೆ ನೀಡಲಾಯಿತು.




ಸಂಕೇಶ್ವರದ ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ  ಕಾರ್ಖಾನೆ ನಿಯಮಿತ, ಇದರ 2025–26 ನೇ ಸಾಲಿನ 66 ನೇ ಕಬ್ಬು ನುರಿಸುವ ಹಂಗಾಮು ಪೂಜೆಯನ್ನು ನೀಡಸೋಸಿಯ ಪ.ಪೂಜ್ಯ.ಶ್ರೀ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಹಾಗೂ ಘೋಡಗೇರಿಯ ಪ.ಪೂ.ಶ್ರೀ ಮಲ್ಲಯ್ಯ ಸ್ವಾಮೀಜಿಗಳ ದಿವ್ಯಸಾನಿಧ್ಯದಲ್ಲಿ, ಮಾಜಿ ಸಚಿವರು ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ಚಾಲನೆ ನೀಡಲಾಯಿತು.